ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 6ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ: 04-03-2008ನೇ ಮಂಗಳವಾರ,

ಸ್ಥಳ:

ಕೊಠಡಿ ಸಂಖ್ಯೆ: 316, ಮೂರನೇ ಮಹಡಿ,

ವಿಧಾನ ಸೌಧ, ಬೆಂಗಳೂರು

# HASSAN INSTITUTE OF MEDICAL SCIENCES, HASSAN

**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ**

(An Autonomous Medical Institution, Government of Karnataka)

SRI CHAMARAJENDRA HOSPITAL, HASSAN – 573201

**ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ - 573 201**

# MEETING RESOLUTIONS

Governing Council Meeting

to be held On 04-03-2008 at 10.30 AM.

Room No. 316, 3rd floor, Vidhana Soudha,

Bangalore.

ದಿನಾಂಕ ೪-೩-೨೦೦೮ರಂದು ನಡೆದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯ ನಡವಳಿಗಳು

SME: 1841-08

---

1) ದಿನಾಂಕ ೪-೩-೨೦೦೮ರಂದು ಮಾನ್ಯ ರಾಜ್ಯಪಾಲರ ಸಲಹೆಗಾರರ ಅಧ್ಯಕ್ಷತೆಯಲ್ಲಿ ನಡೆದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ೩ನೇ ಆಡಳಿತ ಮಂಡಳಿಯ ಸಭೆಯ ನಡವಳಿಯನ್ನು ಕಡತದಲ್ಲಿ ಮಂಡಿಸಲಾಗಿದೆ. ದಯಮಾಡಿ ಸದರಿ ನಡವಳಿಯನ್ನು ಅನುಮೋದಿಸಲು ಕೋರಿದೆ.

(ಡಿ.ಕೆ. ಗೋವಿಂದರಾಜು)
ನಿರ್ದೇಶಕರು (ಪ್ರಭಾರ)ಃ ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

2) ಸರ್ಕಾರದ ಕಾರ್ಯದರ್ಶಿಗಳು(ವೈ.ಶಿ.)

28/3/08

Secretary to Government
Medical Education Dept.

P. P. PRABHU
ADVISOR TO THE GOVERNOR

Phone/Fax No: 08172-231699

# HASSAN INSTITUTE OF MEDICAL SCIENCES, HASSAN
## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ

(An Autonomous Medical Institution, Government of Karnataka)
SRI CHAMARAJENDRA HOSPITAL, HASSAN – 573201

HASSAN INSTITUTE OF MEDICAL SCIENCES HASSAN

## ಅಜೆಂಡಾ

| ಕ್ರ. ಸಂ | ವಿವರಗಳು |
|---|---|
| 1 | ಹಿಂದಿನ ಸಭಾ ನಡುವಳಿಗಳನ್ನು ಓದಿ ಅಂಗೀಕರಿಸುವುದು. |
| 2 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಮ್.ಸಿ.ಐ. ನಿಯಮಾನುಸಾರ ಖಾಲಿ ಇರುವ ಬೋಧಕ ಹುದ್ದೆಗಳ ಭರ್ತಿ ಬಗ್ಗೆ ಪರಿಶೀಲನೆ. |
| 3 | ಶ್ರೀ ಚಾಮರಾಜೇಂದ್ರ ಆಸ್ಪತ್ರೆ , ಹಾಸನ, ಇಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯ ವೃಂದದವರನ್ನು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ ಇಲ್ಲಿಗೆ ವಿಲೀನಗೊಳಿಸುವ ಬಗ್ಗೆ ಅನುಮೋದನೆ. |
| 4 | ಪ್ರಾಂಶುಪಾಲರು / ನಿರ್ದೇಶಕರು , ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ಸೇವೆಯನ್ನು ಮುಂದುವರಿಸುವ ಬಗ್ಗೆ ಅನುಮೋದನೆ. |
| 5 | 27.08.2007ರ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಓದಿ ಅಂಗೀಕರಿಸುವುದು. |
| 6 | 2005-06 ಮತ್ತು 2006-07ನೇ ಸಾಲಿನ ಆಡಿಟ್ ಗೊಳಪಡಿಸಿರುವ ಲೆಕ್ಕ ಪತ್ರಗಳನ್ನು ಓದಿ ಅಂಗೀಕರಿಸುವುದು ಹಾಗೂ ಏಪ್ರಿಲ್ -2007 ರಿಂದ ಜನವರಿ 2008ರವರೆಗಿನ ಖರ್ಚು-ವೆಚ್ಚಗಳ ಅನುಮೋದನೆ. |
| 7 | 2007-08 ಮಾರ್ಚ್ ಅಂತ್ಯಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆಯ ಅನುಮೋದನೆ ಮತ್ತು 2008-09ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರದ ಅನುಮೋದನೆ. |
| 8 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ನೇಮಕಗೊಂಡಿರುವ ಬೋಧಕ ಸಿಬ್ಬಂದಿಯವರ ನೇಮಕಾತಿಯನ್ನು ಅನುಮೋದಿಸುವುದು. |
| 9 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ನೇಮಕ ಗೊಂಡಿರುವ ತಾಂತ್ರಿಕ ಮತ್ತು ಬೋಧಕೇತರ ಸಿಬ್ಬಂದಿಯ ಅನುಮೋದನೆ ಮತ್ತು ಸದರಿಯವರಿಗೆ ಜನವರಿ 2008ರ ಮಾಹೆಯಿಂದ ಮೂಲವೇತನದಲ್ಲಿ ಶೇ.10 ಕಡಿಮೆಗೊಳಿಸಿ ಮಂಜೂರು ಮಾಡಿರುವ ವೇತನವನ್ನು ಅನುಮೋದಿಸುವುದು. |
| 10 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ ಅಗತ್ಯವಿರುವ 60 ಸ್ಟಾಫ್ ನರ್ಸ್ ನೇಮಕಾತಿ ಬಗ್ಗೆ ಅನುಮೋದನೆ. |
| 11 | 2008-09ರ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಉಪಕರಣ ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಅನುಮೋದನೆ, ಮತ್ತು ಅಂತರ್ ಜಾಲ ವ್ಯವಸ್ಥೆಗಾಗಿ ಟೆಂಡರ್ ಕರೆಯುವ ಬಗ್ಗೆ ಅನುಮೋದನೆ. |

| | |
|---|---|
| 12 | ಉಪಹಾರ ಮಂದಿರ ತೆರೆಯಲು ನೀಡಿರುವ ಟೆಂಡರ್‌ನ್ನು ಅನುಮೋದಿಸುವುದು. |
| 13 | ಬಾಲಕ-ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು ವೈದ್ಯರ ವಸತಿ ಗೃಹಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲು ರೂ.10.20 ಲಕ್ಷ ಭದ್ರತಾ ಠೇವಣಿ ಪಾವತಿ ಬಗ್ಗೆ ಅನುಮೋದನೆ. |
| 14 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 2008-09ನೇ ಸಾಲಿಗೆ ಆಹಾರ ಪದಾರ್ಥಗಳು/ ಆಸ್ಪತ್ರೆ ಅವಶ್ಯಕ ವಸ್ತುಗಳು ಮತ್ತು ಶೇ.100 ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಕರೆದಿರುವ ಟೆಂಡರ್ ಬಗ್ಗೆ ಅನುಮೋದನೆ. |
| 15 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆವತಿಯಿಂದ ಪ್ಯಾರ ಮೆಡಿಕಲ್ ಕೋರ್ಸ್ ಮತ್ತು ಡಿ.ಎನ್.ಬಿ. ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಅನುಮೋದನೆ |
| 16 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡದ ಕಾಮಗಾರಿಯ ಪ್ರಗತಿಯ ಬಗ್ಗೆ ಹಾಗೂ ಮೂರನೇ ಹಂತದ ಕಾಮಗಾರಿಗೆ ಅವಶ್ಯಕವಿರುವ ಅನುದಾನದ ಹಾಗೂ ಟೆಂಡರ್ ಕರೆಯುವ ಬಗ್ಗೆ ಪರಿಶೀಲನೆ. |
| 17 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ. |
| 18 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಉನ್ನತ ಹುದ್ದೆಗಳಿಗೆ ಇಲಾಖಾ ಪರೀಕ್ಷೆಗೆ ವಿನಾಯಿತಿ ನೀಡುವ ಬಗ್ಗೆ ಅನುಮೋದನೆ |
| 19 | ಅಧ್ಯಕ್ಷ ಅಪ್ಪಣೆ ಮೇರೆಗೆ ಇತರೆ ವಿಷಯಗಳು. |

HASSAN INSTITUTE OF MEDICAL SCIENCES HASSAN

ಪ್ರಾಂಶುಪಾಲರು/ ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

Phone/Fax No: 08172-231699

HASSAN INSTITUTE OF MEDICAL SCIENCES, HASSAN

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ

(An Autonomous Medical Institution, Government of Karnataka)

SRI CHAMARAJENDRA HOSPITAL, HASSAN – 573201

## ಅಧ್ಯಕ್ಷರ ಅಪ್ಪಣೆ ಮೇರೆಗೆ ಮತ್ತು ಇತರ ವಿಷಯಗಳು:-

1. ಶ್ರೀಚಾಮರಾಜೇಂದ್ರ ಆಸ್ಪತ್ರೆ ಹಾಸನ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸುಟ್ಟಗಾಯದ ವ್ಯಕ್ತಿಗಳು ಚಿಕಿತ್ಸೆಗೆ ಬರುತ್ತಿರುವುದರಿಂದ ಹಾಗೂ ಹಾಲಿ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಪ್ಲಾಸ್ಟಿಕ್ ಸರ್ಜರಿ ಪರಿಣಿತರು ಇರುವುದರಿಂದ, ಪ್ಲಾಸ್ಟಿಕ್ ಸರ್ಜರಿ ವಿಭಾಗವನ್ನು ಪ್ರಾರಂಬಿಸುವ ಬಗ್ಗೆ.

2. ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಜೂನ್-2007ರ ಮಾಹೆಯಿಂದ ಭವಿಷ್ಯ ನಿಧಿಯನ್ನು ಪಾವತಿಸಲಾಗುತ್ತಿದೆ. ಆದರೆ ಪ್ರವರ್ತನಾಧಿಕಾರಿಗಳು ಭವಿಷ್ಯ ನಿಧಿ ಇಲಾಖೆ, ಹಾಸನ ಇವರು ನೌಕರರು ಸಂಸ್ಥೆಗೆ ದಾಖಲಾದ ದಿನಾಂಕದಿಂದಲೆ ಭವಿಷ್ಯ ನಿಧಿಯನ್ನು ಪಾವತಿಸಬೇಕೆಂದು ಸೂಚಿಸಿರುವ ಬಗ್ಗೆ.

3. ಸರ್ಕಾರಿ ಆದೇಶ ಸಂಖ್ಯೆ:HFW 397 MPS 2006(P) ಬೆಂಗಳೂರು ದಿನಾಂಕ:11-06-2007 ರ ಆದೇಶದಲ್ಲಿ ಹೊಸದಾಗಿ ಸ್ಥಾಪಿತಗೊಂಡಿರುವ ವೈದ್ಯಕೀಯ ಕಾಲೇಜುಗಳಿಗೆ ಜಿಲ್ಲಾ ಆಸ್ಪತ್ರೆಯನ್ನು ವಿಲೀನಗೊಳಿಸಿದ್ದು, ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ವೇತನ , ಉಪಕರಣ ಮತ್ತು ಸಲಕರಣೆ, ಅನುದಾನ, ಆಡಳಿತ ವ್ಯವಸ್ಥೆಯ ಸ್ಥಾನ ಮಾನಗಳ ವ್ಯವಸ್ಥೆಯ ಬಗ್ಗೆ.

4. ಆರೋಗ್ಯ ರಕ್ಷ ಕಮಿಟಿಯ ನಿರ್ಣಯಗಳಿಗೆ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಅನುಮೋದನೆ ನೀಡುತ್ತಿದ್ದು ಸರ್ಕಾರಿ ಆದೇಶ ಸಂಖ್ಯೆ:HFW 397 MPS 2006(P) ಬೆಂಗಳೂರು ದಿನಾಂಕ:11-06-2007 ರ ಆದೇಶದಲ್ಲಿ ಹೊಸದಾಗಿ ಸ್ಥಾಪಿತಗೊಂಡಿರುವ ವೈದ್ಯಕೀಯ ಕಾಲೇಜುಗಳಿಗೆ ಜಿಲ್ಲಾ ಆಸ್ಪತ್ರೆಯನ್ನು ವಿಲೀನಗೊಳಿಸಿರುವುದರಿಂದ ಆರೋಗ್ಯ ರಕ್ಷ ಕಮಿಟಿಯನ್ನು ಪುನರ್ರಚಿಸಿ ನಿರ್ಣಯಗಳನ್ನು ಅನುಮೋದನೆ ನೀಡಲು ಪ್ರಾಂಶುಪಾಲರು / ನಿರ್ದೇಶಕರಿಗೆ ಅಧಿಕಾರ ನೀಡುವ ಬಗ್ಗೆ.

ಪ್ರಾಂಶುಪಾಲರು/ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

HASSAN INSTITUTE OF MEDICAL SCIENCES
HASSAN

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ.

ದಿನಾಂಕ: 04-03-2008ರ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಗೌರವಾನ್ವಿತ ರಾಜ್ಯಪಾಲರ ಸಲಹೆಗಾರರಾದ ಶ್ರೀಯುತ ಪಿ.ಪಿ.ಪ್ರಭುರವರ ಘನ ಅಧ್ಯಕ್ಷತೆಯಲ್ಲಿ ವಿಧಾನ ಸೌಧದ, ಕೊಠಡಿ ಸಂಖ್ಯೆ:316ರಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್‌ನ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

**ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು:-**

| | | |
|---|---|---|
| 1. ಗೌರವಾನ್ವಿತ ರಾಜ್ಯಪಾಲರ ಸಲಹೆಗಾರರು,<br>ಕರ್ನಾಟಕ ಸರ್ಕಾರ, ವಿಧಾನ ಸೌಧ,<br>ಬೆಂಗಳೂರು. | : | ಅಧ್ಯಕ್ಷರು |
| 2. ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಆರ್ಥಿಕ ಇಲಾಖೆ, ವಿಧಾನ ಸೌಧ,<br>ಬೆಂಗಳೂರು. | : | ಸದಸ್ಯರು |
| 3. ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಯೋಜನಾ ಇಲಾಖೆ ವಿಕಾಸ ಸೌಧ,<br>ಬೆಂಗಳೂರು. | : | ಸದಸ್ಯರು |
| 4. ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಸಮಾಜ ಕಲ್ಯಾಣ ಇಲಾಖೆ ವಿಧಾನ ಸೌಧ,<br>ಬೆಂಗಳೂರು. | : | ಸದಸ್ಯರು |
| 5. ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ,<br>ಬೆಂಗಳೂರು. | : | ಸದಸ್ಯರು |

: : 2: :

HASSAN INSTITUTE OF MEDICAL SCIENCES HASSAN

6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, : ಸದಸ್ಯರು
ಆನಂದರಾವ್ ವೃತ್ತ,
ಬೆಂಗಳೂರು.

7. ಮುಖ್ಯ ಅಭಿಯಂತರರು, : ಸದಸ್ಯರು
ಲೋಕೋಪಯೋಗಿ ಇಲಾಖೆ (ಸಂಪರ್ಕ ಮತ್ತು ಕಟ್ಟಡಗಳು),
ದಕ್ಷಿಣ ವಲಯ, ಬೆಂಗಳೂರು.

8. ನಿರ್ದೇಶಕರು / ಪ್ರಾಂಶುಪಾಲರು, : ಸದಸ್ಯ ಕಾರ್ಯದರ್ಶಿ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

9. ವೈದ್ಯಕೀಯ ಅಧೀಕ್ಷಕರು, : ಸದಸ್ಯರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

10. ಜಿಲ್ಲಾ ಶಸ್ತ್ರ ಚಿಕಿತ್ಸಕರು, : ಸದಸ್ಯರು
ಶ್ರೀ ಚಾಮರಾಜೇಂದ್ರ ಆಸ್ಪತ್ರೆ,
ಹಾಸನ.

| ಅಜೆಂಡಾ ಕ್ರ.ಸಂ. | ವಿಷಯಗಳು | ತೀರ್ಮಾನಗಳು |
|---|---|---|
| 1 | ಹಿಂದಿನ ಸಭಾ ನಡುವಳಿಗಳನ್ನು ಓದಿ ಅಂಗೀಕರಿಸುವುದು. | ದಿನಾಂಕ:27-07-2007ರ ಗೌರ್ನಿಂಗ್ ಕೌನ್ಸಿಲ್‌ನ ಅಜೆಂಡಾ ಕ್ರಮ ಸಂಖ್ಯೆ(2)ರ ಬಗ್ಗೆ ಚರ್ಚಿಸಲಾಯಿತು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸೇವಾ ನಿಯಮಗಳನ್ನು ರೂಪಿಸಿರುವ ಬಗ್ಗೆ ಮುಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಪರಿಶೀಲನೆಗೆ ಮಂಡಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸಭೆಯಲ್ಲಿ ಸೂಚಿಸಿ ಮುಂದೂಡಲಾಯಿತು. |

: : 3 : :

| | | |
|---|---|---|
| | | ದಿನಾಂಕ:27-07-2007ರ ಗೌರ್ನಿಂಗ್ ಕೌನ್ಸಿಲ್‌ನ ಅಜೆಂಡಾ ಕ್ರಮ ಸಂಖ್ಯೆ (4)ರ ಬಗ್ಗೆ ಚರ್ಚಿಸಲಾಯಿತು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅಗತ್ಯವಿರುವ ಬೋಧಕೇತರ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಳ್ಳಲು ಪತ್ರಿಕಾ ಪ್ರಕಟಣೆ ನೀಡಿದ್ದು ಸುಮಾರು 16 ಸಾವಿರ ಅರ್ಜಿಗಳು ಬಂದಿರುವ ಬಗ್ಗೆ ಪ್ರಾಂಶುಪಾಲರು / ನಿರ್ದೇಶಕರು ಸಭೆಗೆ ವಿವರಿಸಿದರು. ಹೊಸದಾಗಿ ಪ್ರಾರಂಭವಾಗಿರುವ ಎಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸೇವಾ ನಿಯಮಗಳನ್ನು ಅಳವಡಿಸಿ C.E.T. ಮಾದರಿಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ ಈ ಹಿಂದಿನ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು. |
| | | ದಿನಾಂಕ:27-07-2007ರ ಗೌರ್ನಿಂಗ್ ಕೌನ್ಸಿಲ್‌ನ ಅಜೆಂಡಾ ಕ್ರಮ ಸಂಖ್ಯೆ (6)ರ ಬಗ್ಗೆ ಚರ್ಚಿಸಲಾಯಿತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅಗತ್ಯವಿರುವ ಭದ್ರತಾ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಮುಖಾಂತರ ಟೆಂಡರ್ ಕರೆದು ಶಶಿ ಡಿಟೆಕ್ಟೀವ್ ಸರ್ವೀಸ್ , ಬೆಂಗಳೂರುರವರಿಗೆ ನೀಡಿರುವ ಟೆಂಡರನ್ನು ಅನುಮೋದಿಸಲಾಯಿತು. |
| | | ದಿನಾಂಕ:27-07-2007ರ ಗೌರ್ನಿಂಗ್ ಕೌನ್ಸಿಲ್‌ನ ಅಜೆಂಡಾ ಕ್ರಮ ಸಂಖ್ಯೆ (7)ರ ಬಗ್ಗೆ ಚರ್ಚಿಸಲಾಯಿತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅಗತ್ಯವಿರುವ ಅನುರಿತ ಕಾರ್ಮಿಕರ(ಸ್ವೀಪರ್ಸ್) ಸೇವೆಯನ್ನು ಹೊರಗುತ್ತಿಗೆ ಮುಖಾಂತರ ಟೆಂಡರ್ ಕರೆದು ಶಶಿ ಡಿಟೆಕ್ಟೀವ್ ಸರ್ವೀಸ್ , ಬೆಂಗಳೂರುರವರಿಗೆ ನೀಡಿರುವ ಟೆಂಡರನ್ನು ಅನುಮೋದಿಸಲಾಯಿತು. |
| 2 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಮ್.ಸಿ.ಐ. ನಿಯಮಾನುಸಾರ ಖಾಲಿ ಇರುವ ಬೋಧಕ ಹುದ್ದೆಗಳ ಭರ್ತಿ ಬಗ್ಗೆ ಪರಿಶೀಲನೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಮ್.ಸಿ.ಐ. ನಿಯಮಾನುಸಾರ ಖಾಲಿ ಇರುವ ಬೋಧಕ ಹುದ್ದೆಗಳ ಭರ್ತಿಗಾಗಿ ಹಲವಾರು ಬಾರಿ ಪತ್ರಿಕಾ ಪ್ರಕಟಣೆ ಮೂಲಕ ನೇರ ಸಂದರ್ಶನವನ್ನು ಕರೆಯಲಾಗಿದೆ. ಆದರೂ ಸಹ ಖಾಲಿ ಇರುವ ಹುದ್ದೆಗಳ ಭರ್ತಿಯಾಗಿರುವುದಿಲ್ಲವೆಂದು ಪ್ರಾಂಶುಪಾಲರು / ನಿರ್ದೇಶಕರು ಸಭೆಗೆ ವಿವರಿಸಿದರು. 2008-09ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ತಪಾಸಣೆಯಾಗುವುದರೊಳಗೆ ಖಾಲಿ ಇರುವ ಹುದ್ದೆಗಳನ್ನು ಅಗತ್ಯವಾಗಿ ಭರ್ತಿಮಾಡಬೇಕಾಗಿರುವುದರಿಂದ, ರಾಜ್ಯದ ಬೇರೆ ವೈದ್ಯಕೀಯ ಕಾಲೇಜುಗಳಲ್ಲಿ ಹೆಚ್ಚುವರಿ ಇರುವ ಬೋಧಕ ಸಿಬ್ಬಂದಿಯವರನ್ನು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ವರ್ಗಾವಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. |

| | | |
|---|---|---|
| 3 | ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ, ಇಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯ ವೃಂದದವರನ್ನು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ವಿಲೀನಗೊಳಿಸುವ ಬಗ್ಗೆ ಅನುಮೋದನೆ. | ಸರ್ಕಾರದ ಆದೇಶ ಸಂಖ್ಯೆ:HFW 397 MPS 2006(P) ಬೆಂಗಳೂರು ದಿನಾಂಕ: 11-06-2007ರ ಆದೇಶದಲ್ಲಿ ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳಿಗೆ ವಿಲೀನಗೊಳಿಸಿರುವುದರಿಂದ ಜಿಲ್ಲಾ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗಳು ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಗೆ ಬರುತ್ತಾರೆಂಬುದರ ಬಗ್ಗೆ ಚರ್ಚಿಸಲಾಯಿತು. ವಿಲೀನಗೊಳ್ಳಲು ಉದ್ದೇಶಿಸಿರುವ ವೈದ್ಯಾಧಿಕಾರಿಗಳ ಸೇವಾ ಷರತ್ತು, ಮುಂಬಡ್ತಿ, ಪಿಂಚಣಿ ಸೌಲಭ್ಯ ಇತ್ಯಾದಿಗಳ ಬಗ್ಗೆ ಹೊಸದಾಗಿ ಪ್ರಾರಂಭವಾಗಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಏಕ ರೂಪದ ನಿರ್ಣಯಗಳನ್ನು ಅಳವಡಿಸಬೇಕಾ-ಗಿರುವುದರಿಂದ, ಈ ಬಗ್ಗೆ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ) ಮತ್ತು ನಿರ್ದೇಶಕರು (ವೈದ್ಯಕೀಯ ಶಿಕ್ಷಣ) ಇವರೊಡನೆ ಪ್ರಾಂಶುಪಾಲರು / ನಿರ್ದೇಶಕರು ಚರ್ಚಿಸಿ ಆದಷ್ಟು ಶೀಘ್ರವಾಗಿ ನಿರ್ಣಯ ಕೈಗೊಳ್ಳಬೇಕೆಂದು ಅಭಿಪ್ರಾಯ ಪಡಲಾಯಿತು. |
| 4 | ಪ್ರಾಂಶುಪಾಲರು / ನಿರ್ದೇಶಕರು , ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ಸೇವೆಯನ್ನು ಮುಂದುವರಿಸುವ ಬಗ್ಗೆ ಅನುಮೋದನೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಂಶುಪಾಲರು/ನಿರ್ದೇಶಕರಾದ ಡಾ. ಡಿ.ಕೆ.ಗೋವಿಂದರಾಜು ರವರು ದಿನಾಂಕ:31.05.2008ಕ್ಕೆ ವಯೋನಿವೃತ್ತಿಯಾಗುತ್ತಿದ್ದು, ಸದರಿಯವರ ಹುದ್ದೆಯನ್ನು ಸಂಸ್ಥೆಯ ಬೈಲ ಕ್ರಮ ಸಂಖ್ಯೆ(17),(18ರ ಪ್ರಕಾರ 2 ವರ್ಷಗಳ ಕಾಲ ಮುಂದುವರಿಸುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಶಿಫಾರಸ್ಸು ಮಾಡಿ ಗೌರವಾನ್ವಿತ ರಾಜ್ಯಪಾಲರ ಅನುಮತಿಗೆ ಕಳುಹಿಸಲು ತೀರ್ಮಾನಿಸಿತು. |
| 5 | 27.08.2007ರ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಓದಿ ಅಂಗೀಕರಿಸುವುದು. | 27.08.2007ರಂದು ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು. |
| 6 | 2005-06ಮತ್ತು2006-07ನೇ ಸಾಲಿನ ಆಡಿಟ್‌ಗೊಳಪಡಿಸಿರುವ ಲೆಕ್ಕ ಪತ್ರಗಳನ್ನು ಓದಿ ಅಂಗೀಕರಿಸುವುದು ಹಾಗೂ ಏಪ್ರಿಲ್ - 2007 ರಿಂದ ಜನವರಿ 2008ರವರೆಗಿನ ಖರ್ಚು-ವೆಚ್ಚಗಳ ಅನುಮೋದನೆ. | (ಅ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇದರ ಬೈಲಾ ನಿಯಮ(25)ರಂತೆ 2005-06 ಮತ್ತು 2006-07ನೇ ಸಾಲಿನ ಲೆಕ್ಕ ಪತ್ರಗಳನ್ನು ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್ ಮೂಲಕ ಆಡಿಟ್ ಮಾಡಿಸಿರುವುದನ್ನು ಒಪ್ಪಲಾಯಿತು. ಹಾಗೂ ಏಪ್ರಿಲ್-2007 ರಿಂದ ಜನವರಿ - 2008ರ ಅವಧಿಯ ಜಮಾ-ಖರ್ಚು ತಖ್ತೆ: ವಿವರವನ್ನು ಸಹ ಪರಿಶೀಲಿಸಲಾಯಿತು.ಕಾಲೇಜು ಪ್ರಾರಂಭದಲ್ಲಿ ಎಂ.ಸಿ.ಐ ನಿಯಮಾನುಸಾರ ಅಗತ್ಯವಿರುವ ಉಪಕರಣ ಸಲಕರಣೆಗಳನ್ನು ತುರ್ತಾಗಿ ಖರೀದಿಸಿದ್ದು, ಈ ವೇಳೆಯಲ್ಲಿ ಹಣಕಾಸಿನ ಸಮಿತಿಮುಂದೆ ಮಂಡಿಸಲು ಸಾದ್ಯವಾಗಲಿಲ್ಲವೆಂದು ಪ್ರಾಂಶುಪಾಲರು / ನಿರ್ದೇಶಕರು ಸಭೆಗೆ ತಿಳಿಸಿದರು. ಇದರ ಬಗ್ಗೆ ಚರ್ಚಿಸಿ ಇನ್ನೂ ಮುಂದೆ ಲೆಕ್ಕ ಪತ್ರಗಳ ವಿವರವನ್ನು ಮೊದಲು ಹಣಕಾಸಿನ ಸಮಿತಿಯ ಮುಂದೆ ಮಂಡಿಸಿ ನಂತರ ಗೌರ್‍ನಿಂಗ್ ಕೌನ್ಸಿಲ್ ಸಭೆಗೆ ಮಂಡಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಿ ಅನುಮೋದಿಸಲಾಯಿತು. |

::5::

INSTITUTE OF MEDICAL SCIENCES HASSAN

HASSAN INSTITUTE OF MEDICAL SCIENCES HASSAN



| | | |
|---|---|---|
| 7 | 2007-08 ಮಾರ್ಚ್ ಅಂತ್ಯಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆಯ ಅನುಮೋದನೆ ಮತ್ತು 2008-09ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರದ ಅನುಮೋದನೆ. | 2007-08ನೇ ಸಾಲಿನ ಮಾರ್ಚ್ ಅಂತ್ಯದವರೆಗೆ ಅಗತ್ಯವಿರುವ ಅನುದಾನ ಮತ್ತು ಬಾಕಿ ಇರುವ ಬಿಲ್ ವಿವರವನ್ನು, ಹಾಗೂ 2008-09ನೇ ಸಾಲಿಗೆ ಅಗತ್ಯವಿರುವ ಆಯ-ವ್ಯಯ ಮುಂಗಡ ಪತ್ರದ ವಿವರವನ್ನು ಹಣಕಾಸಿನ ಸಮಿತಿಗೆ ಮಂಡಿಸಿ, ಮುಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯ ಅನುಮೋದನೆಗಾಗಿ ಸಲ್ಲಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಿ ಮುಂದೂಡಲಾಯಿತು. |
| 8 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ನೇಮಕಗೊಂಡಿರುವ ಬೋಧಕ ಸಿಬ್ಬಂದಿಯವರ ನೇಮಕಾತಿಯನ್ನು ಅನುಮೋದಿಸುವುದು. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅಗತ್ಯವಿರುವ ಬೋಧಕ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ:07-03-2006ರಲ್ಲಿ ನಡೆದ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಸಭಾನಡುವಳಿಕೆ ಕ್ರಮ ಸಂಖ್ಯೆ(1),(2),(3)ರಲ್ಲಿ ಅನುಮತಿಯನ್ನು ನೀಡಲಾಗಿದ್ದು, ಇದರ ಅನ್ವಯ ಪತ್ರಿಕಾ ಜಾಹೀರಾತು ನೀಡಿ ನೇರ ಸಂದರ್ಶನದ ಮೂಲಕ ಹಂತ ಹಂತವಾಗಿ ಎಮ್.ಸಿ.ಐ. ನಿಯಮಾನುಸಾರ ಅಗತ್ಯವಿರುವ ಬೋಧಕ ಸಿಬ್ಬಂದಿಯವರನ್ನು ಅರ್ಹತೆ ಮತ್ತು ಅನುಭವವನ್ನು ಆಧರಿಸಿ, ನೇಮಕಾತಿ ಮಾಡಿಕೊಂಡಿರುವ ಅಜಂಡಾ ಕ್ರಮ ಸಂಖ್ಯೆ (8) ಅನುಬಂಧ-7ಬಗ್ಗೆ ಸಭೆಗೆ ಪ್ರಾಂಶುಪಾಲರು / ನಿರ್ದೇಶಕರು ವಿವರಿಸಿದರು. ಈ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು, ಇದುವರೆಗೂ ನೇಮಕಗೊಂಡಿರುವ ಬೋಧಕ ಸಿಬ್ಬಂದಿಯವರ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು ಮುಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಗೆ ಮಂಡಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಿ ಮುಂದೂಡಲಾಯಿತು.<br>ವಯೋನಿವೃತ್ತಿ ಬೋಧಕ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಂಡಲ್ಲಿ ನಿವೃತ್ತಿ ವೇತನವನ್ನು ಕಳೆದು ವೇತನವನ್ನು ಪಾವತಿಸುವಂತೆಯು ಮತ್ತು ಖಾಸಗಿ ಸಂಸ್ಥೆಯಿಂದ ನಿವೃತ್ತಿ ಹೊಂದಿ ಮರು ನೇಮಕಾತಿ ಹೊಂದಿದಲ್ಲಿ ಪೂರ್ಣ ಪ್ರಮಾಣದ ವೇತನವನ್ನು ಪಾವತಿ ಮಾಡಬಹುದೆಂದು ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು. |
| 9 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ನೇಮಕಗೊಂಡಿರುವ ತಾಂತ್ರಿಕ ಮತ್ತು ಬೋಧಕೇತರ ಸಿಬ್ಬಂದಿಯ ಅನುಮೋದನೆ ಮತ್ತು ಸದರಿಯವರಿಗೆ ಜನವರಿ 2008ರ ಮಾಹೆಯಿಂದ ಮೂಲವೇತನದಲ್ಲಿ ಶೇ.10 ಕಡಿಮೆಗೊಳಿಸಿ ಮಂಜೂರು ಮಾಡಿರುವ ವೇತನವನ್ನು ಅನುಮೋದಿಸುವುದು. | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ವಿವಿಧ ಹುದ್ದೆಗಳಿಗೆ ಅಗತ್ಯವಿರುವ ಭೋದಕೇತರ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ದಿನಾಂಕ:07-03-2006ರಲ್ಲಿ ನಡೆದ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಸಭಾನಡುವಳಿಕೆ ಕ್ರಮ ಸಂಖ್ಯೆ(1),(2)&(3) ರಲ್ಲಿ ಅನುಮತಿ ನೀಡಿದ್ದು, ಇದರನ್ವಯ ಅಜೆಂಡ ಕ್ರಮ ಸಂಖ್ಯೆ(9) ಅನುಬಂಧ-8ರ ಪ್ರಕಾರ 134 ಸಿಬ್ಬಂದಿಯವರು ತಾತ್ಕಾಲಿಕ ನೇಮಕಾತಿಯ ಅಡಿಯಲ್ಲಿ ನೇಮಕಗೊಂಡಿರುವ ಬಗ್ಗೆ ಚರ್ಚಿಸಲಾಯಿತು, ಆದರೆ ಈ ನೇಮಕಾತಿ ಮಾಡಿಕೊಳ್ಳುವಾಗ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸಿರುವುದಿಲ್ಲವಾದ್ದರಿಂದ ಅನುಮೋದಿಸಲು ಸಾದ್ಯವಿರುವುದಿಲ್ಲ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 134 ಸಿಬ್ಬಂದಿಗಳ ಸೇವೆಯನ್ನು ತಾತ್ಕಾಲಿಕವಾಗಿ ಮುಂದುವರೆಸುವಂತೆ ಸೂಚಿಸಿ ಜನವರಿ - 2008ರ ಮಾಹೆಯಿಂದ ಭೋದಕೇತರ ಸಿಬ್ಬಂದಿಯವರಿಗೆ ಮೂಲವೇತನದಲ್ಲಿ ಶೇ.10 ಕಡಿಮೆಗೊಳಿಸಿ ಮಂಜೂರು ಮಾಡಿರುವ ವೇತನವನ್ನು ಅನುಮೋದಿಸಲಾಯಿತು. |

HASSAN INSTITUTE OF MEDICAL SCIENCES
HASSAN



| | | |
|---|---|---|
| | | ಹೊಸದಾಗಿ ಪ್ರಾರಂಭವಾಗಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಬೋಧಕೇತರ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಳ್ಳಲು ಏಕರೂಪ ವೃಂದ ಮತ್ತು ನೇಮಕಾತಿ ನಿಯಮವನ್ನು ರೂಪಿಸಿ ಸಿ.ಇ.ಟಿ ಮಾದರಿಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಮಾಡಬೇಕಾಗಿರುವುದರಿಂದ, ಸರ್ಕಾರದಿಂದ ಮಂಜೂರಾಗಿರುವ ಹುದ್ದೆ ಮತ್ತು ಹೆಚ್ಚುವರಿ ಅಗತ್ಯವಿರುವ ಸಿಬ್ಬಂದಿಯವರ ವಿವರವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಲಾಯಿತು. |
| 10 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ ಅಗತ್ಯವಿರುವ 60 ಸ್ಟಾಫ್ ನರ್ಸ್ ನೇಮಕಾತಿ ಬಗ್ಗೆ ಅನುಮೋದನೆ. | ಸರ್ಕಾರದ ಆದೇಶ ಸಂಖ್ಯೆ ಆಕುಕ:266:ಎಂಪಿಎಸ್-2006 ಬೆಂಗಳೂರು, ದಿನಾಂಕ:12-09-2006 ಆದೇಶದಲ್ಲಿ 255 ಸ್ಟಾಫ್‌ನರ್ಸ್ ನೇಮಕಾತಿಗೆ ಮಂಜೂರಾತಿ ದೊರಕಿದ್ದು ಶ್ರೀ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ 116 ಸ್ಟಾಫ್ ನರ್ಸ್ ಸೇವೆ ಸಲ್ಲಿಸುತ್ತಿದ್ದು ತುರ್ತಾಗಿ 60 ಸ್ಟಾಫ್‌ನರ್ಸ್ ನೇಮಕಾತಿ ಮಾಡಿಕೊಳ್ಳಬೇಕೆಂದು ಸಭೆಗೆ ಪ್ರಾಂಶುಪಾಲರು / ನಿರ್ದೇಶಕರು ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರು ಕೋರಿರುವುದರಿಂದ ಅಜಂಡ ಕ್ರಮಸಂಖ್ಯೆ (9)ರ ಮಾದರಿಯಲ್ಲಿಯೇ ನೇಮಕಾತಿ ಮಾಡಲು ತೀರ್ಮಾನಿಸಿದೆ. |
| 11 | 2008-09ರ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಉಪಕರಣ ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಅನುಮೋದನೆ, ಮತ್ತು ಅಂತರ್ ಜಾಲ ವ್ಯವಸ್ಥೆಗಾಗಿ ಟೆಂಡರ್ ಕರೆಯುವ ಬಗ್ಗೆ ಅನುಮೋದನೆ. | 2008-09ರ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಉಪಕರಣ ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಮತ್ತು ಅಂತರ್ ಜಾಲ ವ್ಯವಸ್ಥೆಗಾಗಿ ಟೆಂಡರ್ ಕರೆಯುವ ಬಗ್ಗೆ ಚರ್ಚಿಸಲಾಯಿತು. ಈ ವಿಷಯವನ್ನು ಖರೀದಿ ಸಮಿತಿ, ಹಣಕಾಸಿನ ಸಮಿತಿಗಳ ಮುಂದೆ ಮಂಡಿಸಿ ನಂತರ ಗೌರ್ನಿಂಗ್ ಕೌನ್ಸಿಲ್‌ನ ಅನುಮೋದನೆಗೆ ಸಲ್ಲಿಸುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಿ ಮುಂದೂಡಲಾಯಿತು.<br>ಸಿ.ಟಿ .ಸ್ಕ್ಯಾನ್ ಇವುಗಳನ್ನು ಖರೀದಿಸಲು ಆಯಾ ಕಾಲೇಜಿನ ಪ್ರಾಂಶುಪಾಲರು / ನಿರ್ದೇಶಕರು ಬೇಡಿಕೆ ಪಟ್ಟಿಯನ್ನು ಸಲ್ಲಿಸುವಂತೆಯೂ, ಮತ್ತು 6 ಕಾಲೇಜುಗಳ ಬೇಡಿಕೆ ಪಟ್ಟಿಯನ್ನು ಕ್ರೋಢೀಕರಿಸಿ ಸರ್ಕಾರದ ಮಟ್ಟದಲ್ಲಿ ಟೆಂಡರ್ ಕರೆಯಲು ತೀರ್ಮಾನಿಸಲಾಯಿತು. |
| 12 | ಉಪಹಾರ ಮಂದಿರ ತೆರೆಯಲು ನೀಡಿರುವ ಟೆಂಡರ್‌ನ್ನು ಅನುಮೋದಿಸುವುದು. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಉಪಹಾರ ಗೃಹವನ್ನು ನಡೆಸಲು, ಹಿಮ್ಸ್ , ಆಡಳಿತ-01/2007-08. ದಿನಾಂಕ:18-05-2007ರನ್ವಯ ಟೆಂಡರ್ ಪ್ರಕಟಣೆ ನೀಡಿದ್ದು, ಶ್ರೀ ಎಮ್.ಜಗನಾಥ್ ಶೆಟ್ಟಿ, ಹೋಟೆಲ್ ನಮನ ಉಪಾಹಾರ್ , ಬಾಲಜಿ ನಿಲಯ, ತೆಲಗರ ಬೀದಿ, ಹಾಸನ. ಇವರಿಗೆ ಮಾಸಿಕ ಬಾಡಿಗೆ 5,000-00ರೂಗಳನ್ನು ನಿಗದಿಪಡಿಸಿ ನೀಡಿರುವ ಟೆಂಡರ್ ಅನ್ನು ಒಪ್ಪಿ ಅನುಮೋದಿಸಲಾಯಿತು. |

: : 7 : :

| | | |
|---|---|---|
| 13 | ಬಾಲಕ-ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು ವೈದ್ಯರ ವಸತಿ ಗೃಹಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲು ರೂ.10.20 ಲಕ್ಷ ಭದ್ರತಾ ಠೇವಣಿ ಪಾವತಿ ಬಗ್ಗೆ ಅನುಮೋದನೆ. | ಬಾಲಕ-ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು ವೈದ್ಯರ ವಸತಿ ಗೃಹಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲು ರೂ.1016936-00 ಮುಂಗಡ ಪಾವತಿ ಮಾಡುವಂತೆ ಕಾರ್ಯಪಾಲಕ ಅಭಿಯಂತರರು ಸೆಸ್ಕಾಂ ಇವರ ಪತ್ರದ ಸಂಖ್ಯೆ : ಇಇಇ/ಎಇಇ(ಓ)ಹೆಚ್ ಎಸ್ ಎನ್ / ಎಇಟಿ-1/11759-60 ದಿನಾಂಕ: 06-03-2007ರ ಬಗ್ಗೆ ತಿಳಿಸಿರುವುದನ್ನು ಪ್ರಾಂಶುಪಾಲರು / ನಿರ್ದೇಶಕರು ಸಭೆಗೆ ತಿಳಿಸಿದರು. ಈ ಬಾಬ್ತನ್ನು ಪಾವತಿ ಮಾಡಿ ವಿದ್ಯುತ್ ಸಂಪರ್ಕ ಪಡೆಯಲು ಅನುಮೋದಿಸಲಾಯಿತು. |
| 14 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 2008-09ನೇ ಸಾಲಿಗೆ ಆಹಾರ ಪದಾರ್ಥಗಳು/ ಆಸ್ಪತ್ರೆ ಅವಶ್ಯಕ ವಸ್ತುಗಳು ಮತ್ತು ಶೇ.100 ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಕರೆದಿರುವ ಟೆಂಡರ್ ಬಗ್ಗೆ ಅನುಮೋದನೆ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 2008-09ನೇ ಸಾಲಿಗೆ ಆಹಾರ ಪದಾರ್ಥಗಳು / ಆಸ್ಪತ್ರೆ ಅವಶ್ಯಕ ವಸ್ತುಗಳು ಮತ್ತು ಶೇ.100 ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜಿಗಾಗಿ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ:05-02-2008ರಂದು ನೇರವೇರಿಸಿದನ್ನು ಚರ್ಚಿಸಲಾಯಿತು, ಈ ಪ್ರಕ್ರಿಯೆಯನ್ನು ಪ್ರಾಂಶುಪಾಲರು / ನಿರ್ದೇಶಕರು ಮುಂದುವರೆಸಿ ಆರ್ಥಿಕ ಸಮಿತಿಗೆ ಮಂಡಿಸಿ ನಂತರ ಪರಿಶೀಲನೆಗಾಗಿ ಗೌರ್ನಿಂಗ್ ಕೌನ್ಸಿಲ್ ಸಭೆಯ ಅನುಮೋದನೆಗೆ ಸಲ್ಲಿಸಲು ಪ್ರಾಂಶುಪಾಲರು / ನಿರ್ದೇಶಕರಿಗೆ ಸೂಚಿಸಿ ಮುಂದೂಡಲಾಯಿತು. |
| 15 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆವತಿಯಿಂದ ಪ್ಯಾರ ಮೆಡಿಕಲ್ ಕೋರ್ಸ್ ಮತ್ತು ಡಿ.ಎನ್.ಬಿ. ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಅನುಮೋದನೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆವತಿಯಿಂದ ಪ್ಯಾರ ಮೆಡಿಕಲ್ ಕೋರ್ಸ್ ಮತ್ತು ಡಿ.ಎನ್.ಬಿ. ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಚರ್ಚಿಸಲಾಯಿತು. ಸಂಸ್ಥೆಯು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರಿಂದ ಅಗತ್ಯವಿರುವ ಪ್ಯಾರ ಮೆಡಿಕಲ್ ಕೋರ್ಸ್, ಡಿ.ಎನ್.ಬಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆ ಅನುಮೋದಿಸಲಾಯಿತು. |
| 16 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡದ ಕಾಮಗಾರಿಯ ಪ್ರಗತಿಯ ಬಗ್ಗೆ ಹಾಗೂ ಮೂರನೇ ಹಂತದ ಕಾಮಗಾರಿಗೆ ಅವಶ್ಯಕವಿರುವ ಅನುದಾನದ ಹಾಗೂ ಟೆಂಡರ್ ಕೆರೆಯುವ ಬಗ್ಗೆ ಪರಿಶೀಲನೆ. | ಅ)ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡದ ಕಾಮಗಾರಿ, ಬಾಲಕ-ಬಾಲಕಿಯರ ಹಾಸ್ಟೆಲ್, ವೈದ್ಯರ ವಸತಿಗೃಹಗಳ ಕಾಮಗಾರಿಯು ಪ್ರಗತಿಯ ಹಂತದ ಬಗ್ಗೆ ಚರ್ಚಿಸಲಾಯಿತು ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಯಿತು.<br>(ಆ) ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 21-06-2007 ರಂದು ವಿಧಾನ ಸೌಧದ ಸಮಿತಿ ಕೊಠಡಿಯಲ್ಲಿ ಜರುಗಿದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡ ಕಾಮಗಾರಿಗಳ ಬಗ್ಗೆ ನಡೆದ ಪರಿಶೀಲನ ಸಭೆಯ ನಡುವಳಿಯಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ವೀಕ್ಷಕರು ತಮ್ಮ ಪರಿವೀಕ್ಷಣಾ ಸಮಯದಲ್ಲಿ ಸೂಚಿಸಿರುವಂತೆ ಕೆಲವೊಂದು ಪರಿವರ್ತನೆಗಳನ್ನು ಅಳವಡಿಸುವುದು ಹಾಗೂ ಹೆಚ್ಚುವರಿ ಕಾಮಗಾರಿಗಳ ಬಾಬ್ತುಗಳನ್ನು ನಿರ್ವಹಿಸುವುದು ಅವಶ್ಯವಿದ್ದು ಸದರಿ ಬಾಬ್ತುಗಳ ವಿವರಗಳನ್ನು ಮತ್ತು ಪೂರಕ ಕಾಮಗಾರಿಗಳಿಗೆ ಬೇಕಾಗುವ ಹೆಚ್ಚುವರಿ ವೆಚ್ಚಗಳ ಬಗ್ಗೆ ಮುಖ್ಯ ಅಭಿಯಂತರರು ಮುಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಲು ಸೂಚಿಸಿ ಮುಂದೂಡಲಾಯಿತು. |

: : 8 : :

HASSAN INSTITUTE OF MEDICAL SCIENCES HASSAN

| | | |
|---|---|---|
| 17 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಮೇಲ್ದರ್ಜೆಗೇರಿಸುವ ಸಲುವಾಗಿ ಹಾಲಿ ಇರುವ 350 ಹಾಸಿಗೆಗಳ ಸೌಲಭ್ಯವನ್ನು 400 ಹಾಸಿಗೆಗಳ ಸೌಲಭ್ಯವನ್ನು ಅಳವಡಿಸಿ ಹಾಗೂ ಎಮ್.ಸಿ.ಐ. ಪರಿವೀಕ್ಷಕರು ಸೂಚಿಸಿರುವಂತೆ ಇತರೆ ಅತ್ಯಗತ್ಯವಾದ ನವೀಕರಣದ ಕಾಮಗಾರಿಗಳು 2008-09ರ ಎಮ್.ಸಿ.ಐ. ಪರಿವೀಕ್ಷಣೆಗೆ ಬರುವುದರೊಳಗೆ ತುರ್ತಾಗಿ ಮಾಡಬೇಕಾಗಿರುವುದರಿಂದ ಅಂದಾಜು ವೆಚ್ಚ 20 ಲಕ್ಷರೂಗಳಿಗೆ ಅನುಮೋದನೆ ನೀಡಿದೆ. |
| 18 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಉನ್ನತ ಹುದ್ದೆಗಳಿಗೆ ಇಲಾಖಾ ಪರೀಕ್ಷೆಗೆ ವಿನಾಯಿತಿ ನೀಡುವ ಬಗ್ಗೆ ಅನುಮೋದನೆ | ಕಾಲೇಜಿನ ಬೋಧಕ ವೃಂದದ ಪ್ರಾಧ್ಯಾಪಕರ ಹುದ್ದೆ ಮತ್ತು ಉನ್ನತ ಹುದ್ದೆಗಳಿಗೆ ಮುಂಬಡ್ತಿ ಮತ್ತು ನೇಮಕಾತಿಗೆ ಇಲಾಖಾ ಪರೀಕ್ಷೆಯಿಂದ ವಿನಾಯಿತಿ ನೀಡುವುದರ ಬಗ್ಗೆ ಚರ್ಚಿಸಿ ಮುಂದೂಡಲಾಯಿತು. |
| 19 | ಅಧ್ಯಕ್ಷರಅಪ್ಪಣೆ ಮೇರೆಗೆ ಇತರೆ ವಿಷಯಗಳು.<br>ಅ) ಪ್ಲಾಸ್ಟಿಕ್ ಸರ್ಜರಿ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ. | ಅ) ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸುಟ್ಟಗಾಯದ ರೋಗಿಗಳು ಚಿಕಿತ್ಸೆಗೆ ಬರುತ್ತಿರುವುದರಿಂದ ಪ್ಲಾಸ್ಟಿಕ್ ಸರ್ಜರಿ ವಿಭಾಗವನ್ನು ಪ್ರಾರಂಭಿಸುವುದು ಅತ್ಯಗತ್ಯವಾಗಿರುತ್ತದೆ. ಡಾ. ಉದಯ್ ಶಂಕರ್‌ರವರು ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸಾ ವಿಭಾಗದಲ್ಲಿ ಪರಿಣಿತರಾಗಿರುವುದರಿಂದ ಇವರನ್ನು ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರ ಸ್ಥಾನದಿಂದ ವರ್ಗಾಯಿಸಿ ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿ ಈ ವಿಭಾಗವನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳುವಂತೆ ಪ್ರಾಂಶುಪಾಲರು / ನಿರ್ದೇಶಕರಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು. |
| | ಆ) ಭವಿಷ್ಯ ನಿಧಿ ಪಾವತಿ ಬಗ್ಗೆ. | ಆ) ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಜೂನ್-2007ರ ಮಾಹೆಯಿಂದ ಭವಿಷ್ಯ ನಿಧಿಯನ್ನು ಪಾವತಿಸಲಾಗುತ್ತಿದೆ. ಆದರೆ ಪ್ರವರ್ತನಾಧಿಕಾರಿಗಳು ಭವಿಷ್ಯ ನಿಧಿ ಇಲಾಖೆ, ಹಾಸನ ಇವರು ನೌಕರರು ಸಂಸ್ಥೆಗೆ ದಾಖಲಾದ ದಿನಾಂಕದಿಂದಲೇ ಭವಿಷ್ಯ ನಿಧಿಯನ್ನು ಪಾವತಿಸಬೇಕೆಂದು ಸೂಚಿಸಿರುವ ಬಗ್ಗೆ ಚರ್ಚಿಸಿ ವಿಷಯವನ್ನು ಮುಂದಿನ ಗೌರ್ನಿಂಗ್ ಕೌನ್ಸಿಲ್ ಸಭೆಗೆ ಮುಂದೂಡಲಾಯಿತು. |



HASSAN INSTITUTE OF MEDICAL SCIENCES HASSAN

| | | |
|---|---|---|
| | ಇ) ಸರ್ಕಾರಿ ಆದೇಶ ಸಂಖ್ಯೆ:HFW 397 MPS 2006(P) ಬೆಂಗಳೂರು ದಿನಾಂಕ:11-06-2007 ರ ಆದೇಶದ ಬಗ್ಗೆ. | ಇ) ಸರ್ಕಾರಿ ಆದೇಶ ಸಂಖ್ಯೆ:HFW 397 MPS 2006(P) ಬೆಂಗಳೂರು ದಿನಾಂಕ: 11-06-2007 ರ ಆದೇಶದಲ್ಲಿ ಹೊಸದಾಗಿ ಸ್ಥಾಪಿತಗೊಂಡಿರುವ ವೈದ್ಯಕೀಯ ಕಾಲೇಜುಗಳಿಗೆ ಜಿಲ್ಲಾ ಆಸ್ಪತ್ರೆಯನ್ನು ವಿಲೀನಗೊಳಿಸಿದ್ದು. ಈ ಕಾಲೇಜುಗಳಿಗೆ ಸಂಬಂಧಿಸಿದ ಅನುದಾನವು ಏಪ್ರಿಲ್-2008ರಿಂದ ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಗೆ ಬರುತ್ತಿದ್ದು, ಆಡಳಿತ ವ್ಯವಸ್ಥೆಗಳ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸುವುದೆಂದು ತೀರ್ಮಾನಿಸಿ ಮುಂದೂಡಲಾಯಿತು. |
| | ಈ) ಆರೋಗ್ಯ ರಕ್ಷಾ ಕಮಿಟಿಯ ನಿರ್ಣಯಗಳ ಅನುಮೋದನೆ ಬಗ್ಗೆ. | ಈ) ಆರೋಗ್ಯ ರಕ್ಷಾ ಕಮಿಟಿಯ ನಿರ್ಣಯಗಳಿಗೆ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಇವರ ಅಧ್ಯಕ್ಷತೆಯಲ್ಲಿ ಅನುಮೊದನೆ ನೀಡುತ್ತಿದ್ದು, ಇನ್ನು ಮುಂದೆ ಆರೋಗ್ಯ ರಕ್ಷಾ ಕಮಿಟಿಯನ್ನು ಸಂಸ್ಥೆಯ ಪ್ರಾಂಶುಪಾಲರು / ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪುನರ್ರಚಿಸಿ ನಿರ್ಣಯಗಳನ್ನು ಕೈಗೊಳ್ಳಲು ಅಧಿಕಾರ ನೀಡಿದೆ. |

ಪಿ.ಪಿ. ಪ್ರಭು,
ರಾಜ್ಯಪಾಲರ ಸಲಹೆಗಾರರು,
ಕರ್ನಾಟಕ ಸರ್ಕಾರ, ವಿಧಾನ ಸೌಧ,
ಬೆಂಗಳೂರು,

HASSAN INSTITUTE OF MEDICAL SCIENCES HASSAN